**ಬೆಂಗಳೂರು ವಿಶ್ವವಿದ್ಯಾಲಯ**
**ದೂರ ಶಿಕ್ಷಣ ನಿರ್ದೇಶನಾಲಯ,**
ಜ್ಞಾನಭಾರತಿ ಆವರಣ, ಬೆಂಗಳೂರು – 560 056.

**ಸಂ:ಡಿ.ಸಿ.ಸಿ/ಯು.ಜಿ–ಪಿ.ಜಿ/ದಾಖಲಾತಿ–II&III ವರ್ಷ/2020–21/ಜಾಹಿರಾತು/2021–22** **ದಿನಾಂಕ: 19/08/2021**

## ದಾಖಲಾತಿ ಅಧಿಸೂಚನೆ

**ಪ್ರಸ್ತಾವನೆ:** ಕರ್ನಾಟಕ ಸರ್ಕಾರವು 2020ರಲ್ಲಿ ಹೊರ ತಂದಿರುವ ಕಾನೂನಿನ ಅನುಸಾರವಾಗಿ ರಾಜ್ಯದ ಯಾವುದೇ ವಿಶ್ವವಿದ್ಯಾಲಯಗಳು 2020–21ರ ಸಾಲಿನ ಶೈಕ್ಷಣಿಕ ವರ್ಷದಿಂದ ದೂರ ಶಿಕ್ಷಣ ಕಾರ್ಯಕ್ರಮಗಳಿಗೆ ಯಾವುದೇ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವುದನ್ನು ನಿರ್ಭಂದಿಸಿದೆ ಹಾಗಾಗಿ ಇನ್ನು ಮುಂದೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು ಅನ್ನು ಮಾತ್ರ ದೂರ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಲು ಅನುಮೋದಿಸಿದೆ. ಹಾಗಾಗಿ ಬೆಂಗಳೂರು ವಿಶ್ವವಿದ್ಯಾಲಯ ದೂರ ಶಿಕ್ಷಣ ನಿರ್ದೇಶನಾಲಯವು ಯಾವುದೇ ಕೋರ್ಸಗಳಿಗೆ ವಿದ್ಯಾರ್ಥಿಗಳನ್ನು ದಾಖಲಿಸುವಂತಿಲ್ಲ. **ಹಾಗಾಗಿ 2019–20ರ ಶೈಕ್ಷಣಿಕ ಅವಧಿಯಲ್ಲಿ ಮೊದಲನೇ ವರ್ಷದ ಸ್ನಾತಕ ಹಾಗೂ ಸ್ನಾತಕೊತರ ಕೋರ್ಸ್‌ಗಳಿಗೆ ದಾಖಲಾತಿ ಹೊಂದಿದ ಅಂತಹ ವಿದ್ಯಾರ್ಥಿಗಳಿಗೆ II ಹಾಗೂ III ವರ್ಷದ ಸ್ನಾತಕ ಪದವಿಗಳಿಗೆ ಹಾಗೂ 2ನೇ ವರ್ಷದ ಸ್ನಾತಕೋತ್ತರ ಪದವಿಗಳಿಗೆ 2020–21ರ ಸಾಲಿನ ಶೈಕ್ಷಣಿಕ ಅವಧಿಗೆ ವಿದ್ಯಾರ್ಥಿಗಳನ್ನು ದಾಖಲಿಸಲು ಈ ಅಧಿಸೂಚನೆಯ ಮುಂಖಾತರ ಅರ್ಜಿಗಳನ್ನು ಅಹ್ವಾನಿಸಲಾಗಿದೆ.**

2020–21 ನೇ ಸಾಲಿನ ಶೈಕ್ಷಣಿಕ ವರ್ಷದ ದೂರ ಶಿಕ್ಷಣ ವಿಶ್ವವಿದ್ಯಾಲಯ ಯೋಜನೆಗಳಡಿ ವಿವಿಧ ಕೋರ್ಸ್‌ಗಳ ಸ್ನಾತಕ **II** ಮತ್ತು **III** ವರ್ಷದ (ಬಿ.ಎ, ಬಿ.ಕಾಂ ಮತ್ತು ಬಿ.ಬಿ.ಎ ಕೋರ್ಸ್‌ಗಳಿಗೆ ಮಾತ್ರ) ಮತ್ತು ಸ್ನಾತಕೋತ್ತರ (**II** ವರ್ಷದ ಎಂ.ಎ, ಎಂ.ಕಾಂ ಮತ್ತು ಎಂ.ಎಸ್ಸಿ ಕೋರ್ಸ್‌ಗಳಿಗೆ ಮಾತ್ರ) ದಾಖಲಾತಿಗಳಿಗಾಗಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

- **i)** **ಬಿ.ಎ** (ಕನ್ನಡ/ಆಂಗ್ಲ ಮಾಧ್ಯಮ)
- **ii)** **ಬಿ.ಕಾಂ.** (ಆಂಗ್ಲ ಮಾಧ್ಯಮ ಮಾತ್ರ)
- **iii)** **ಬಿ.ಬಿ.ಎ.** (ಆಂಗ್ಲ ಮಾಧ್ಯಮ ಮಾತ್ರ)
- **iv)** **ಎಂ.ಎ:** ಕನ್ನಡ, ಇಂಗ್ಲೀಷ್
  **ಎಂ.ಎ:** ಇತಿಹಾಸ, ಅರ್ಥಶಾಸ್ತ್ರ, ರಾಜಕೀಯ ವಿಜ್ಞಾನ, ಸಮಾಜಶಾಸ್ತ್ರ (ಕನ್ನಡ/ಆಂಗ್ಲಮಾಧ್ಯಮ)–
- **v)** **ಎಂ.ಕಾಂ:** (ಆಂಗ್ಲ ಮಾಧ್ಯಮ)
- **vi)** **ಎಂ.ಎಸ್ಸಿ:** ಗಣಿತ (ಆಂಗ್ಲಮಾಧ್ಯಮ)

**ಸೂಚನೆ:** 1) ಕೋರ್ಸ್‌ಗಳ ವಿವರ ಮತ್ತು ಅರ್ಹತಾ ನಿಯಮ/ಶುಲ್ಕಗಳ ವಿವರ ಮತ್ತು ಅಗತ್ಯವಾದ ಮಾಹಿತಿಗಳನ್ನು ಅಂತರ್ಜಾಲ (ಆನ್‌ಲೈನ್) ವೆಬ್‌ಸೈಟ್‌ವಿಳಾಸ:www.dccbub.in/ www.bangaloreuniversity.ac.in / ರಲ್ಲಿ ಪಡೆಯಬಹುದಾಗಿದೆ ಹಾಗೂ ದೂರವಾಣಿ ಸಂಖ್ಯೆ: **080–22961261,1262,1263,1264,1265,1266,1267** ನ್ನು ಸಂಪರ್ಕಿಸುವುದು.

ಮಾಹಿತಿ ಪುಸ್ತಕ ಸಹಿತ ಅರ್ಜಿಗಳನ್ನು ಪಡೆಯಲು ನಿಗದಿತ ಶುಲ್ಕ ರೂ 750/– ಅನ್ನು ಅಂತರ್ಜಾಲದ ಮುಂಖಾತರ ವಿಶ್ವವಿದ್ಯಾಲಯಕ್ಕೆ ಪಾವತಿಸಿ ಅದರ ರಸೀದಿಯ ಪ್ರಿಂಟ್ ಅನ್ನು ಪಡೆದು ರಸೀದಿಯನ್ನು, ದೂರ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – 56 ರಲ್ಲಿ ಸಲ್ಲಿಸಿ ಕೋರ್ಸ್‌ಗಳಿಗೆ ಸಂಭಂದಪಟ್ಟ ಅರ್ಜಿಗಳನ್ನು ಪಡೆಯಬಹುದು.

ಅಥವಾ

ಅರ್ಜಿಗಳನ್ನು ಅಂತರ್ಜಾಲ ವೆಬ್‌ಸೈಟ್ www.dccbub.in ನಿಂದ ಡೌನ್‌ಲೋಡ್ ಮಾಡಿದ ಅಭ್ಯರ್ಥಿಗಳು ನಿಗದಿತ ಅರ್ಜಿಗಳನ್ನು ಸಲ್ಲಿಸುವಾಗ ಅರ್ಜಿ ಹಾಗೂ ಮಾಹಿತಿ ಪುಸ್ತಕದ ಶುಲ್ಕ 750/– ಅನ್ನು ಬೆಂಗಳೂರು ವಿಶ್ವವಿದ್ಯಾಲಯದ ಅಂತರ್ಜಾಲದ ಮುಖಾಂತರ ಪಾವತಿಸಿ ಅದರ ರಸೀದಿಯನ್ನು ಸಲ್ಲಿಸಿ ಇವರು ಮಾಹಿತಿ ಪುಸ್ತಕವನ್ನು ದೂರ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿ ಪಡೆಯಬಹುದು.

**ಅರ್ಜಿಗಳನ್ನು ಪಡೆಯುವ ಮತ್ತು ಸಲ್ಲಿಸುವ ಸ್ಥಳ:**

ದೂರ ಶಿಕ್ಷಣ ನಿರ್ದೇಶನಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–56.

ಮತ್ತು

ಭರ್ತಿ ಮಾಡಿದ ಅರ್ಜಿಗಳನ್ನು ಎಲ್ಲಾ ದಾಖಲೆಗಳೊಂದಿಗೆ ಅರ್ಜಿ ಶುಲ್ಕದ ರಸೀತಿ ಪ್ರತಿಯನ್ನು ಒಳಗೊಂಡಂತೆ ನಿಗದಿತ ದಿನಾಂಕದೊಳಗೆ ದೂರ ಶಿಕ್ಷಣ ನಿರ್ದೇಶನಾಲಯ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು–560056 ಇಲ್ಲಿಗೆ ಸಲ್ಲಿಸುವುದು.

**ದಾಖಲಾತಿ ಅರ್ಜಿಗಳನ್ನು ನೀಡುವ ಮತ್ತು ಸ್ವೀಕರಿಸುವ ಪ್ರಕಟಿತ ದಿನಾಂಕಗಳು:**

1. **ಅರ್ಜಿ ಫಾರಂಗಳನ್ನು ವಿತರಿಸುವ ಕೊನೆಯ ದಿನಾಂಕ (ದಂಡವಿಲ್ಲದೆ): 25/08/2021 ರಿಂದ 30/09/2021**
2. **ಅರ್ಜಿ ಫಾರಂಗಳನ್ನು ಪಡೆಯಲು ಕೊನೆಯ ದಿನಾಂಕ (ರೂ 200/– ದಂಡ ಶುಲ್ಕದೊಂದಿಗೆ): 01/10/2021 ರಿಂದ 30/10/2021**
3. **ಭರ್ತಿ ಮಾಡಿದ ಅರ್ಜಿ ಫಾರಂಗಳನ್ನು ಎಲ್ಲಾ ದಾಖಲಾತಿಗಳೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ (ದಂಡವಿಲ್ಲದೆ): 15/11/2021**

**ದಾಖಲಾತಿಯ ವಿಧಾನ:** ಅರ್ಹ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ಮೂಲ ದಾಖಲಾತಿಗಳನ್ನು ಅಂದರೆ ಸಂಬಂದಪಟ್ಟ ಎಲ್ಲಾ ಅಂಕಪಟ್ಟಿಗಳನ್ನು, ಹುಟ್ಟಿದ ದಿನಾಂಕ ಪ್ರಮಾಣ ಪತ್ರ, ನಿಗದಿತ ಶುಲ್ಕ, ಪಾವತಿಸಿದ ರಸೀದಿ ಹಾಗೂ ಎರಡು ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳು ಇತ್ಯಾಧಿಗಳ ಸಹಿತ ತಾವಾಗಿಯೇ ಬಂದು ದಾಖಲಾಗಲು ಸೂಚಿಸಲಾಗಿದೆ.

ಈ ಅಧಿಸೂಚನೆಯು ಇತರ ಯಾವುದೇ ಅಧ್ಯಯನ ಕೇಂದ್ರಗಳಿಗೆ ಅನ್ವಯವಾಗುವುದಿಲ್ಲ. ಹಾಗೂ ವಿಶ್ವವಿದ್ಯಾಲವು ಈ ನಿಟ್ಟಿನಲ್ಲಿ ಯಾವುದೇ ಅಧ್ಯಯನ ಕೇಂದ್ರಗಳನ್ನ ಗುರುತಿಸಿಲ್ಲ.

**Sd/-**
**ನಿರ್ದೇಶಕರು**